# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ

ದಿನಾಂಕ:-05.01.2019

ವಾರ್ಡ್ ನಂ-15 ದಾಸರಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರ ಕಛೇರಿಯ ಸಭಾಂಗಣದಲ್ಲಿ ದಿನಾಂಕ-05.01.2019 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಕೆಗಳು.

1. ಶ್ರೀಮತಿ ಉಮಾದೇವಿ ನಾಗರಾಜ (ಬಿ.ಬಿ.ಎಂ.ಪಿ. ಸದಸ್ಯರು ವಾರ್ಡ್ 15 ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ).
2. ಶ್ರೀ ಎಂ.ಮನಿರಾಜು (ಸದಸ್ಯರು).
3. ಶ್ರೀ ಡಿ.ಎಂ.ವೆಂಕಟೇಶ್ (ಸದಸ್ಯರು).
4. ಶ್ರೀ ತಿಮ್ಮಪ್ಪ (ಸದಸ್ಯರು).
5. ಶ್ರೀ ಗೋವಿಂದ್ ರಾಜ್.ಜಿ.ಎಸ್. (ಸದಸ್ಯರು).
6. ಶ್ರೀ ಮಂಜೇಶ್.ಎನ್. (ಸದಸ್ಯರು).
7. ಶ್ರೀ ಜಗದೀಶ್ (ಸದಸ್ಯರು).
8. ಶ್ರೀ ಮರಿಸಿದ್ದಪ್ಪ (ಸದಸ್ಯರು).
9. ಶ್ರೀಮತಿ ಶೊಭ (ಮಹಿಳಾ ಸದಸ್ಯರು).
10. ಶ್ರೀಮತಿ ಗೀತಾ (ಮಹಿಳಾ ಸದಸ್ಯರು).
11. ಶ್ರೀಮತಿ ಸುಜಾತಾ (ಮಹಿಳಾ ಸದಸ್ಯರು).

ಸದರಿ ವಾರ್ಡ್ ಕಮಿಟಿ ಸಭೆಗೆ ಅಧ್ಯಕ್ಷರು ಮತ್ತೆ ವಾರ್ಡ್ ಕಮಿಟಿ ಕಾರ್ಯದರ್ಶಿ ಹಾಗೂ 4ಜನ ಸದಸ್ಯರು ಮತ್ತು ಕಿರಿಯ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷರು ಈ ವಾರ್ಡ್ ಕಮಿಟಿ ಸಭೆಯಲ್ಲಿ ಭಾಗವಹಿಸಿದ್ದರು.

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಕುರಿತು ವಾರ್ಡ್ ಸಮಿತಿಯ ಕಾರ್ಯದರ್ಶಿಯಾದ ಶ್ರೀಮತಿ ಅರ್ಚನಾ ರವರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಅಧ್ಯಕ್ಷರಾದ ಶ್ರೀಮತಿ ಉಮಾದೇವಿ ನಾಗರಾಜ (ಬಿ.ಬಿ.ಎಂ.ಪಿ. ಸದಸ್ಯರು) ಮಾತಾನಾಡುತ್ತ ಸಂಘ, ಸಂಸ್ಥೆಗಳು, ಕಸ ವಿಲೇವಾರಿ, ಬಗ್ಗೆ ಸಂಬಂಧಪಟ್ಟಂತೆ ಹಾಗೂ ಬೀದಿ ದೀಪಗಳ ನಿರ್ವಹಣೆ ಬಗ್ಗೆ ಹಾಗೂ ಬೀದಿ ನಾಯಿಗಳ ಹಾವಳಿಯನ್ನು ತಪ್ಪಿಸಲು ವಾರ್ಡ್ ಕಮಿಟಿಯಲ್ಲಿ ಮತನಾಡಿದರು.

ವಾರ್ಡ್ ಕಮಿಟಿ ಸಭೆಯಲ್ಲಿ ಮಾತನಾಡುತ್ತಾ:-

1. ಎನ್ ಮಂಜೇಶ್ (ಸದಸ್ಯರು,) ದಾಸರಹಳ್ಳಿ ವಾರ್ಡ್ ನಂ15 ರಲ್ಲಿ ಕಸ ವಿಲೇವಾರಿ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಸುಮಾರು 07 ತಿಂಗಳಿನಿಂದ ವಾಹನ ಸಂಖ್ಯೆ ಸರಿಯಾದ ರೀತಿಯಲ್ಲಿ ಬರುತ್ತಿಲ್ಲ ಗುತ್ತಿಗೆದಾರರಿಗೆ ನಿಗದಿ ಪಡಿಸಿರುವ ಕಾರ್ಮಿಕರು ಸರಿಯಾಗಿ ಬರುತ್ತಿಲ್ಲ ಕಳೆದ ತಿಂಗಳಿನಿಂದ ತಿಳಿಸುತ್ತಾ ಬರುತ್ತಿದ್ದಿವೆ ಗುತ್ತಿಗೆದಾರರು ತಲೆಕೆಡಿಸಿಕೊಳ್ಳುತ್ತಿಲ್ಲ ಬಿ.ಬಿ.ಎಂ.ಪಿ ನಿಗದಿ ಪಡಿಸಿರುವ ಆಟೋ ಮತ್ತು ಲಾರಿಗಳು ಮತ್ತು ಕಾರ್ಮಿಕರು ಸರಿಯಾಗಿ ಇರಬೇಕೆಂದು ಈ ವಾರ್ಡ್ ಕಮಿಟಿಯಲ್ಲಿ ಸಲಹೆಯನ್ನು ನೀಡಿರುತ್ತಾರೆ.
2. ಡಿ.ಎಂ. ವೆಂಕಟೇಶ್. (ಸದಸ್ಯರು) ದಾಸರಹಳ್ಳಿ ವಾರ್ಡ್‌ನಲ್ಲಿ ಕಸದ ವಿಲೇವಾರಿ ಮಾಡುವಂತಹ ಗುತ್ತಿಗೆದಾರರು ಯಾರೆಂದು ಇನ್ನು ಕೂಡ ನನಗೆ ತಿಳಿದು ಬಂದಿಲ್ಲ ಮತ್ತು ಗುತ್ತಿಗೆದಾರರ ಹೆಸರು ಸಹ ತಿಳಿದಿರುವುದಿಲ್ಲ ಬಿ.ಬಿ.ಎಂ.ಪಿಯಿಂದ ಗುತ್ತಿಗೆದಾರರಿಗೆ ಎಷ್ಟು ಕಾಂಪ್ಯಕ್ಟರ್‌ಗಳು, ಆಟೋಗಳು ಮತ್ತು ಕಾರ್ಮಿಕರು ಇದ್ದಾರೆ ಎನ್ನುವುದು ಗೊತ್ತಿಲ್ಲ. ನಿಗದಿತ ಸಮಯಕ್ಕೆ ಸರಿಯಾಗಿ ಆಟೋಗಳು ಬರುತ್ತಿಲ್ಲ ನಿಗದಿ ಪಡಿಸಿರುವ ವಾಹನಗಳು ಬರಬೇಕೆಂದು ಈ ವಾರ್ಡ್ ಕಮಿಟಿಯಲ್ಲಿ ಸಲಹೆಯನ್ನು ನೀಡಿರುತ್ತಾರೆ.
3. ಶ್ರೀಮತಿ ಶೋಭ (ಮಹಿಳಾ ಸದ್ಯಸರು) ದಾಸರಹಳ್ಳಿ ವಾರ್ಡ್ ನಂ15ರಲ್ಲಿ ಪ್ರತಿನಿತ್ಯ ಹಸಿಕಸ ಮತ್ತು ಒಣಕಸವನ್ನು ತೆಗೆದುಕೊಳ್ಳಬೇಕು ದಿನಕ್ಕೊಮ್ಮೆ ಒಣಕಸ ತೆಗೆದುಕೊಳ್ಳಬೆಕು ಬಿ.ಬಿ.ಎಂ.ಪಿಯಿಂದ ನಿಗದಿಪಡಿಸಿರುವ ಗುತ್ತಿಗೆದಾರರಿಗೆ ಆಟೋ ಮತ್ತು ಟ್ರಿಪ್ಪರ್‌ಗಳನ್ನು ಮತ್ತು ಕಾರ್ಮಿಕರನ್ನು ಮೇಲಾಧಿಕಾರಿಗಳು ಪರಿಶೀಲಿಸಿ ತದ ನಂತರ ಬಿಲ್ಲುಗಳನ್ನು ಪಾವತಿಬೇಕೆಂದು ಈ ವಾರ್ಡ್ ಕಮಿಟಿಯಲ್ಲಿ ಸಲಹೆಯನ್ನು ನೀಡಿರುತ್ತಾರೆ.
4. ಶ್ರೀ ಜಗದೀಶ್ (ಸದಸ್ಯರು) ದಾಸರಹಳ್ಳಿಯ ವಾರ್ಡ್ ನಂ15 ರಲ್ಲಿ ಎಸ್.ರಮೇಶ್ ರಸ್ತೆ, ಪ್ರಶಾಂತನಗರ ಕಾಳಸ್ತ್ರೀನಗರ ಮಾಡಲ್ ಕಾಲೋನಿ ತೆಂಗಿನ ತೋಟ ಎಂ.ಟಿ.ಎಸ್ ಕಾಲೋನಿ ದಾಸರಹಳ್ಳಿ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಸಂಜೆ ಮತ್ತು ಬೆಳಿಗಿನ ಜಾವ ಸರಿಯಾಗಿ ಆನ್ ಮತ್ತು ಆಫ್ ಮಾಡಿತ್ತಿಲ್ಲವೆಂದು ಈ ವಾರ್ಡ್ ಕಮಿಟಿಯಲ್ಲಿ ಸಲಹೆಯನ್ನು ನೀಡಿರುತ್ತಾರೆ.

ಈ ಎಲ್ಲಾ ವಿಷಯಕ್ಕೆ ಸಂಭಂದಿಸಿದಂತೆ ಶ್ರೀಮತಿ ಉಮಾದೇವಿ ನಾಗರಾಜ ರವರು ಬಿ.ಬಿ.ಎಂ.ಪಿ. ಸದಸ್ಯರು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ. ಮಾತನಾಡುತ್ತಾ,

ಸದರಿ ವಿಷಯಕ್ಕೆ ಸಂಭಂದಿಸಿದಂತೆ ಎಲ್ಲಾ ಸದಸ್ಯರು ಸೇರಿ ಕಸದ ಸಮಸ್ಯೆ, ಬೀದಿ ದೀಪಗಳ ಸಮಸ್ಯೆ, ಸರಿಯಾದ ಸಮಯಕ್ಕೆ ಆಟೋ ಟ್ರಿಪ್ಪರ್‌ಗಳ ಬಗ್ಗೆ ಹಾಗೂ ಹಸಿ ಕಸ ಒಣಕಸ ವಿಂಗಡಿಸುವುದರ ಬಗ್ಗೆ ಹಾಗೂ ಬೀದಿ ನಾಯಿಗಳ ಹಾವಳಿಯ ಬಗ್ಗೆ ಹಿಂದೆ ನಡೆದ 02 ವಾರ್ಡ್ ಕಮಿಟಿಯಲ್ಲಿ ಯಾವುದೇ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಿರುವುದಿಲ್ಲ ಬಿ.ಬಿ.ಎಂ.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮತ್ತು ಸಹಾಯಕ ಅಭಿಯಂತರಿಗೆ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷರಿಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಾರ್ಡ್ ಕಮಿಟಿ ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದರು.

ಸದರಿ ವಿಷಯಕ್ಕೆ ಸಂಭಂದಿಸಿದಂತೆ ವಾರ್ಡ್‌ನ ಸರ್ವೋತೋಮುಖ ಅಭಿವೃದ್ಧಿಗಾಗಿ ಮತ್ತು ಪೌರಕಾರ್ಮಿಕರಿಗೆ ಸಿಗುವಂತಹ ಸೌಲಭ್ಯಗಳನ್ನು ಕಸದ ಲಾರಿ ಲೋಡರ್ಸ್ ಮತ್ತು ಆಟೋ ಹೆಲ್ಪರ್‌ಗಳನ್ನು ಪೌರಕಾರ್ಮಿಕರಾಗಿ ನೇಮಿಸಬೇಕೆಂದು ಈ ಸಭೆಯಲ್ಲಿ ಎಲ್ಲಾ ಸದಸ್ಯರು ಒಮ್ಮತದಿಂದ ಸಭೆಯಲ್ಲಿ ತೀರ್ಮಾನಿಸಲಾಯಿತು.

ವಾರ್ಡ್ ಕಮಿಟಿ ಕಾರ್ಯದರ್ಶಿ
ಸ,ಅಭಿಯಂತರರು (ವಾರ್ಡ್ ನಂ.15)

Umadevi BB

ಶ್ರೀಮತಿ ಉಮಾದೇವಿ ನಾಗರಾಜ
ವಾರ್ಡ್ ನಂ.15 ದಾಸರಹಳ್ಳಿ
ಸದಸ್ಯರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬಿ. ದಾಸರಹಳ್ಳಿ ವಾರ್ಡ್ ನಂ.-15

ಪ್ರತಿಯನ್ನು:-

1. ಜಂಟಿ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಸಹಾಯಕ ಅಭಿಯಂತರರು, (ವಾರ್ಡ್ ನಂ.15) ರವರಿಗೆ.
4. ಕಮಿಟಿ ಸದಸ್ಯರು.
5. ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ವಾರ್ಡ್ ಸಂಖ್ಯೆ : 14,** ಬಾಗಲಗುಂಟೆ, ಸದಸ್ಯರ ಕಛೇರಿಯ ಸಭಾಂಗಣ, ಎಂ.ಇ.ಐ. ಬಡಾವಣೆಯ ಆಟದ ಮೈದಾನ, ಎಂ.ಇ.ಐ. ಬಡಾವಣೆ, ಬಾಗಲಗುಂಟೆ, ಬೆಂಗಳೂರು – 560073.

******

ವಾರ್ಡ್ ಸಂಖ್ಯೆ : 14, ಬಾಗಲಗುಂಟೆಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರ ಕಛೇರಿಯ ಸಭಾಂಗಣದಲ್ಲಿ ದಿನಾಂಕ : 05/01/2019ರಂದು ಸಭೆಯನ್ನು ಆಯೋಜಿಸಲಾಗಿರುತ್ತದೆ.

ಮುಂದುವರಿದಂತೆ ಮಾನ್ಯ ಬಿಬಿಎಂಪಿ ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ನರಸಿಂಹನಾಯಕ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿರುತ್ತಾರೆ, ಈ ಸಭೆಗೆ ಬೆಂಗಳೂರು ವಿದ್ಯುತ್ ನಿಗಮ ಹಾಗೂ ಪೋಲೀಸ್ (ಕಾನೂನು ಮತ್ತು ಸಂಚಾರ) ಇಲಾಖೆಯಿಂದ ಯಾರು ಹಜರಾಗದೇ ಇರುವುದರಿಂದ ಹಾಗೂ ಪುಮುಖ ಕಛೇರಿಯಾದ ಬೆಂಗಳೂರು ಜಲಮಂಡಳಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಅಧ್ಯಕ್ಷರ ಅನುಮತಿ ಪಡೆದು ಮುಖ್ಯವಾದ ಸಭೆಗಳಿಗೆ ಹೋಗಿರುವುದರಿಂದ ಸಭೆಯನ್ನು ದಿನಾಂಕ : 19/01/2019ಕ್ಕೆ ಮುಂದೂಡಲಾಗಿರುತ್ತದೆ, ಈ ಸಭೆಗೆ ಹಾಜರಾಗಿರುವ ಅಧ್ಯಕ್ಷರು, ಹಾಜರಿರುವ ವಾರ್ಡ್ ಸಮಿತಿ ಸದಸ್ಯರು ಸರ್ವಾನುಮತದಿಂದ ಅಂಗೀಕರಿಸಿರುತ್ತಾರೆ.

(ಕೆ. ನರಸಿಂಹನಾಯಕ)
ಅಧ್ಯಕ್ಷರು ಹಾಗೂ ಸದಸ್ಯರು
ವಾರ್ಡ್ ಸಂಖ್ಯೆ : 14, ಬಾಗಲಗುಂಟೆ.

ವಾರ್ಡ್ ಸಮಿತಿ ಸದಸ್ಯರ ಸಹಿ:-

1.
2.
3.
4.
5.
6. Kalyanamma
7.
8.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

**ದಿನಾಂಕ: 05.01.2019 ರಂದು 11–30 ಗಂಟೆಗೆ ಶ್ರೀಮತಿ ಭಾಗ್ಯಮ್ಮ ಕೃಷ್ಣಯ್ಯ, ಬಿ.ಬಿ.ಎಂ.ಪಿ ಸದಸ್ಯರು ವಾರ್ಡ್–71 (ಹೆಗ್ಗನಹಳ್ಳಿ) ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ಹೆಗ್ಗನಹಳ್ಳಿ ವಾರ್ಡ್ ಪಾಲಿಕೆ ಸದಸ್ಯರ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀಮತಿ ಭಾಗ್ಯಮ್ಮ ಕೃಷ್ಣಯ್ಯ, ಅಧ್ಯಕ್ಷರು
2. ಶ್ರೀ. ಸುಂದರ್, ಸದಸ್ಯರು
3. ಶ್ರೀ ಲೋಕೇಶ್, ಸದಸ್ಯರು
4. ಶ್ರೀಮತಿ ಪುಷ್ಪಮ್ಮ, ಸದಸ್ಯರು
5. ಶ್ರೀಮತಿ ಹೇಮಲತಾ.ಬಿ.ಕೆ, ಸದಸ್ಯರು
6. ಶ್ರೀಮತಿ ಸರಸ್ವತಿ, ಸದಸ್ಯರು
7. ಶ್ರೀ. ರಾಮಣ್ಣ, ಸದಸ್ಯರು
8. ಶ್ರೀ. ಕಣ್ಣಪ್ಪ, ಸದಸ್ಯರು
9. ಶ್ರೀ. ಕೆಂಪೇಗೌಡ.ಕೆ ಸದಸ್ಯರು
10. ಶ್ರೀ. ಜಿ.ಜಯಪ್ರಕಾಶ್ ಸದಸ್ಯರು
11. ಶ್ರೀ. ಮಂಜುನಾಥ್ ಡಿ.ಎಸ್, ಕಾರ್ಯದರ್ಶಿ ಹಾಗೂ ಸಂಚಾಲಕರು

**: ಚರ್ಚಿಯಾದ ವಿಷಯಗಳು :**

1. ವಾಡ್–71ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

**:ನಡಾವಳಿಯ ವರದಿ:**

➢ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ್ ಡಿ.ಎಸ್ ರವರು ಮಾತನಾಡುತ್ತಾ ಸಭೆಗೆ ಹಾಜರಾದ ವಾರ್ಡ್ ಸಮಿತಿಯ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

➢ ಮಾನ್ಯ ಅಧ್ಯಕ್ಷರು ಮಾತಾನಾಡುತ್ತಾ, 2018–19ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಕರಪತ್ರಗಳ ಮೂಲಕ ಸಾರ್ವಜನಿಕರಿಗೆ ತಲುಪುವಂತೆ ಮಾಡಿ, ನಿಗದಿತ ಅವಧಿಯೊಳಗೆ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

➢ ವಾರ್ಡ್ ಸಮಿತಿಯ ಸದಸ್ಯರಾದ ಶ್ರೀ ಲೋಕೇಶ್‌ರವರು, ಮಾತನಾಡಿ ಒಣ ಕಸ ಮತ್ತು ಹಸಿ ಕಸವನ್ನು ಮನೆ ಹಂತದಲ್ಲಿಯೇ ಬೇರ್ಪಡಿಸುವ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಪ್ರಚಾರ ಮಾಡಬೇಕೆಂದು ಕೋರಿದರು.

➢ ಶ್ರೀ ಕಣ್ಣಪ್ಪ ರವರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಹಾವಳಿ ಹೆಚ್ಚಾಗುತ್ತಿದ್ದು, ಇದರಿಂದಾಗೀ ಸಾರ್ವಜನಿಕರಿಗೆ ತುಂಬಾ ತೊಂದರೆಯುಂಟಾಗಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು.

➢ ಶ್ರೀ ಸುಂದರ್ ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ ಸಂಜೀವಿನಿ ನಗರ 1ನೇ ಹಂತ, 2ನೇ ಹಂತ ಹಾಗೂ ಸುಂಕದಕಟ್ಟೆ ಪೈಪ್ ಲೇನ್ ರಸ್ತೆಯಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಗಳನ್ನು ಶೀಘ್ರವಾಗಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿದರು ಹಾಗೂ ಇನ್ನುಳಿದ ಕಾಮಗಾರಿಗಳನ್ನು ಶ್ರೀಘ್ರವಾಗಿ ಪ್ರಾರಂಭಿಸಿ ಮುಕ್ತಾಯಗೊಳಿಸಲು ಕೋರಿದರು. ಉಳಿದ ಸದಸ್ಯರೆಲ್ಲರಲ್ಲಿಯೂ ಇದೇ ಅಭಿಪ್ರಾಯ ವ್ಯಕ್ತವಾಯಿತು.

➢ ಶ್ರೀ ಈಶ್ವರ್ ರವರು ಮಾತನಾಡುತ್ತಾ, ವಾರ್ಡಿನ ಕೆಲವು ಕಡೆಗಳಲ್ಲಿ ಬೀದಿದೀಪಗಳು ಉರಿಯುತ್ತಿಲ್ಲವೆಂದು ಸಾರ್ವಜನಿಕರು ಕೋರಿದ್ದು, ಸಂಬಂಧಪಟ್ಟವರಿಗೆ ಸೂಚಿಸಿ ದುರಸ್ತಿ ಮಾಡಲು ಕೋರಿರುತ್ತಾರೆ.

➢ ಶ್ರೀಮತಿ ಹೇಮಲತಾ ಮಾತನಾಡುತ್ತಾ, ವಾರ್ಡಿನ ಕೆಲವು ಕಡೆಗಳಲ್ಲಿ ಮರಗಳ ಕೊಂಬೆಗಳನ್ನು ಕತ್ತರಿಸಲು ಸಾರ್ವಜನಿಕರು ಕೋರಿದ್ದು, ಸಂಬಂಧಪಟ್ಟವರಿಗೆ ಸೂಚಿಸಿ ಕತ್ತರಿಸಲು ಕೋರಿರುತ್ತಾರೆ.

➢ ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಇದೇ ರೀತಿ ಪ್ರತಿ ತಿಂಗಳು ಮೊದಲ ಶನಿವಾರ ಬೆಳಿಗ್ಗೆ 11.30 ಘಂಟೆಗೆ ಮಾಸಿಕ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ, ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಸದಸ್ಯರಲ್ಲಿ ಮನವಿ ಮಾಡಿದರು ಹಾಗೂ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಮಂಜುನಾಥ್.ಡಿ.ಎಸ್ ರವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ-ವಾರ್ಡ್ 71 ಹಾಗೂ**
**ಸಹಾಯಕ ಅಭಿಯಂತರರು,**
**ವಾರ್ಡ್ ನಂ.71, ಹೆಗ್ಗನಹಳ್ಳಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**(ಭಾಗ್ಯಮ್ಮ ಕೃಷ್ಣಯ್ಯ)**
**ಪಾಲಿಕೆ ಸದಸ್ಯರು ವಾರ್ಡ್-71 (ಹೆಗ್ಗನಹಳ್ಳಿ)**
**ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು**
ಬಿ.ಬಿ.ಎಂ.ಪಿ. ಸದಸ್ಯರು
ವಾರ್ಡ್ ನಂ. 71, ಹೆಗ್ಗನಹಳ್ಳಿ

ಪ್ರತಿಯನ್ನು:
1. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಮಂಡಿಸಿದೆ.
2. ಜಂಟಿ ಆಯುಕ್ತರು (ದಾಸರಹಳ್ಳಿ ವಲಯ)ರವರ ಅವಗಾಹನೆಗೆ ಮಂಡಿಸಿದೆ.
3. ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ರವರ ಅವಗಾಹನೆಗೆ ಮಂಡಿಸಿದೆ.
4. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಿದೆ.
5. ಕಾ.ಪಾ.ಅ (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ.
6. ವಾರ್ಡ್ 71 ರ ಸಮಿತಿಯ ಸದಸ್ಯರು ರವರಿಗೆ.
7. ಕಲ್ಯಾಣಾಧಿಕಾರಿಗಳು, ದಾಸರಹಳ್ಳಿ ವಲಯರವರ ಮಾಹಿತಿಗಾಗಿ,
8. ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯರವರ ಮಾಹಿತಿಗಾಗಿ,
9. ಪಶುಸಂಗೋಪನಾಧಿಕಾರಿ, ದಾಸರಹಳ್ಳಿ ವಲಯರವರ ಮಾಹಿತಿಗಾಗಿ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘನ ತ್ಯಾಜ್ಯ & ನಿರ್ವಹಣೆ) ದಾಸರಹಳ್ಳಿ ವಲಯವರರಿಗೆ

ದಿನಾಂಕ: 05.01.2019 ರಂದು ಬೆಳಗ್ಗೆ 9.00 ಗಂಟೆಗೆ ಮಾನ್ಯ ನಗರಪಾಲಿಕೆ ಸದಸ್ಯರು, ವಾರ್ಡ್ ನಂ. 41 ರವರ ಕೊಠಡಿಯಲ್ಲಿ ಅಧ್ಯಕ್ಷರ ನೇತ್ರತ್ವದಲ್ಲಿ ವಾರ್ಡ್‌ಗಳಲ್ಲಿ ಇವರು ಕುಂದು ಕೊರತೆಗಳ ಬಗ್ಗೆ ವಾರ್ಡ್ ಸಮಿತಿ ಸಭೆಯ ನಡವಳಿಕೆಗಳು:

ಸಭೆಗೆ ಹಾಜರಿದ್ದ ಸದಸ್ಯರು:

7. ಅಧ್ಯಕ್ಷರು: ಶ್ರೀಮತಿ ಲಲಿತಾ ತಿಮ್ಮನಂಜಯ್ಯ
8. ಕಾರ್ಯದರ್ಶಿ: ಶ್ರೀಮತಿ. ಎಲ್. ನಾಗರತ್ನ, ಸ.ಕಂ.ಅ.(ಪೀ.ಕೈ.ಪ್ರ)
9. ಸದಸ್ಯರು:
   1. ದೇವರಾಜ್
   2. ನರಸಿಂಹಗೌಡ
   3. ಆನಂದಣ್ಣ ಶಿವಪುರ
   4. ಎನ್.ಟಿ.ರಾಜಣ್ಣ
   5. ಹಳೆ ರಂಗಯ್ಯ
   6. ಸುಬ್ರಮಣಿ
   7. ಗುರುನಾಥ್
   8. ಚಿಕ್ಕಮಂಜಣ್ಣ
   9. ರಂಗಸ್ವಾಮಯ್ಯ
   10. ನವೀನ (ಮುನಿಯ)
   11. ರವಿ
   12. ಡಾ.ರಮೇಶ್.
   13. ಮಂಜುನಾಥ್ ನಾಗಯ್ಯ
   14. ಚಂದ್ರಪ್ಪ
   15. ಜಯಲಕ್ಷ್ಮಿ, ರೇಣುಕಾ
   16. ನಾರಾಯಣಪ್ಪ

..2...

ಬಿ.ಬಿ.ಎಂ.ಪಿ.ಯಿಂದ ಹಾಜರಿದ್ದ ಸಿಬ್ಬಂದಿ:

9. ವೆಂಕಟೇಶ್, ಸಹಾಯಕ ಅಭಿಯಂತರರು
10. ಶಂಕರ್. ಮೌ,ಮಾ
11. ಬಸವರಾಜು, ಕಂ.ಪ
12. ಮಂಜುನಾಥ್.ಕಂ.ವ

ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಅಧ್ಯಕ್ಷರು ಸ್ವಾಗತಿಸಿ, ವಾರ್ಡ್ ನಂ. 41ರ ಅಭಿವೃದ್ಧಿಗೆ ಮತ್ತು ಕೆಲಸ ಕಾರ್ಯಗಳಿಗೆ ನಾವೆಲ್ಲರೂ ಒಮ್ಮತದಿಂದ ಶ್ರದ್ದೆ ವಹಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಅಧ್ಯಕ್ಷರು ಸದಸ್ಯರುಗಳಿಗೆ ತಿಳಿಸಿದರು, ಈ ವಿಷಯಕ್ಕೆ ಸರ್ವಾನುಮತದಿಂದ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು.

1. ಮೊದಲನೆಯದಾಗಿ ರಾಜಗೋಪಾಲನಗರದ ನಿವಾಸಿಗಳು ಒಂಟಿ ಮನೆಗಳಿಗೆ ಅರ್ಜಿ ಸಲ್ಲಿಸಿದ್ದು, ಆಯುಕ್ತರ ಆದೇಶದ ಮೇರೆಗೆ ರಾಜಗೋಪಾಲನಗರದ ನಿವಾಸಿ ನಾಗರೀಕ ಬಂದುಗಳೆಲ್ಲರೂ ಸಭೆ ನಡೆಸುವ ಸಮಯಕ್ಕೆ ಹಾಝರಾಗಿದ್ದು, ಒಚಿಟಿ ಮನೆಗಳಿಗೆ ಅರ್ಜಿ ಸಲ್ಲಿ ಸುಮಾರು 6 ತಿಂಗಳಾಗಿದ್ದು, ಈವರೆವಿಗೂ ಯಾವುದೇ ತರಹದ ಮುನ್ಸೂಚನೆಗಳಿಲ್ಲದ್ದರಿಂದ ಸದಸ್ಯರನ್ನು ಆ ಭಾಗದ ವಾರ್ಡ್ ಕಮಿಟಿಯ ಪ್ರತಿನಿದಿಯಾದ ಜಯಲಕ್ಷ್ಮಿ, ರೇಣುಕಮ್ಮ. ಮುತ್ತಕ್ಕ ಹಾಗೂ ಪ್ರಸನ್ನ, ಹಾಗೂ ಸುಶೀಲ್ ಕುಮಾರ್‌ರವರು ದಯಮಾಡಿ ಅಧ್ಯಕ್ಷರೇ ತೀರಾ ಬಡ ಕುಟುಂಬದವರಾಗಿದ್ದರಿಂದ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಾದರಿಂದ ಪಾಲಿಕೆಯಿಂದ ತೀರಾ ಬಡವರಿಗೆ ಅನ್ಯಾಯವಾಗುತ್ತಿದ್ದು, ದಯಮಾಡಿ ಇವರುಗಳಿಗೆ ಒಂಟಿ ಮನೆ ನಿರ್ಮಾಣಕ್ಕಾಗಿ ಫಲಾನುಭವಿಗಳಿಗೆ ಕಾರ್ಯಾದೇಶವನ್ನು ನೀಡುತ್ತೀರ ಎಂದು ನಂಬಿರುತ್ತೇವೆ, ಹಾಗೂ ಈವರೆಗೂ ಒಂಟಿ ಮನೆಗಳಿಗೆ ಕಾರ್ಯಾದೇಶ ನೀಡಿದಂತ ಫಲಾನುಭವಿಗಳಿಗೆ 1 ನೇ ಸುತ್ತಿನ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ ಸುಮಾರು ವರ್ಷಗಟ್ಟಲೇ ಹಣ ತೆಗೆದುಕೊಳ್ಳಲು

ಕಾಲಾವಕಾಶ ತೆಗೆದುಕೊಂಡರೆ ನೀವು ಕೊಡುವ ಹಣವು ಬಡ್ಡಿಯನ್ನು ಕಟ್ಟಲು ಅಷ್ಟೆ ಸಹಾಯವಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

2. ಜಲಮಂಡಳಿಗೆ ತೀರಾ ಮಳೆಗಾಲವಾಗಿದ್ದು, ಕಾವೇರಿ ಜಲಮಂಡಳೀ ಸಮಯಕ್ಕೆ ಸರಿಯಾಗಿ ನೀರಿನ ವ್ಯವಸ್ಥೆ ಮಾಡುತ್ತಿಲ್ಲ, ಗೃಹಲಕ್ಷ್ಮಿ ಬಡಾವಣೆ, ರಾಜೇಶ್ವರಿನಗರ, ಶಿವಪುರ, ನೆಲಗದರನಹಳ್ಳೀ ಈ ಭಾಗದಲ್ಲಿ 10 ದಿನಕ್ಕೊಮ್ಮೆ ನೀರನ್ನು ಸರಬರಾಜು ಮಾಡುತ್ತಿರುತ್ತಾರೆ, ಸಾರ್ವಜನಿಕರಾದ ನಾವು ಪ್ರತಿನ ಅವಶ್ಯಕತೆ ಇರುವಂತಹ ನೀರಿಗಾಗಿ ಹಣ ಪಾವತಿಸುತ್ತಿದ್ದು, ನೀರು ನೀಡದಿರುವ ಜಲಮಂಡಳಿಯ ವಿರುದ್ದ ನಿಮ್ಮ ಮುಖೇನ ಚಳುವಳಿ ಹಾಗೂ ಹೋರಾಟ ನಡೆಸಲು ಮುಂದಾಗಲು ನಿಮ್ಮ ಅಪ್ಪಣೆ ಬೇಕಾಗಿದೆ, ಇಲ್ಲವಾದಲ್ಲಿ ತಾವೇ ಖುದ್ದಾಗಿ ಜಲಮಂಡಳಿಗೆ ಒಂದು ಬಾರಿ ತಿಳಿಸಿ ಮುಂದಿನ ಕ್ರಮಕ್ಕೆ ಒತ್ತುಕೊಡುತ್ತೀರೆಂದು ಗೃಹಲಕ್ಷ್ಮಿ ಭಗದ ವಾರ್ಡ್ ಕಮಿಟಿಯ ಸದಸ್ಯರಾದ ಗುರುನಾಥ್, ರಂಗಸ್ವಾಮಿ, ನಾಗರಾಜು, ಚಿಕ್ಕಮಂಜೇಗೌಡರು ತಿಳಿಸಿರುತ್ತಾರೆ, ಇದೇ ಜಲಮಂಡಳಿಯು ಸಂಬಂಧವಾಗಿ ಶಿವಪುರ, ನೆಲಗದರನಹಳ್ಳಿ ಹಾಗೂ ದುಗ್ಗಲಮ್ಮ ಬಡಾವಣೆ ಮತ್ತು ಲಗ್ಗೆರೆ ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಪಾರ್ವತಿನಗರ, ಚಾಮುಂಡಿಪುರ, ರಾಜೇಶ್ವರಿನಗರ, ಈ ಭಾಗದಲ್ಲಿ ಸ್ಟಾರ್ ಮೋಟಾರ್ ಮೋರಿಯಲ್ಲಿ ಅಳವಡಿಸಿರುವಂತಹ ಸಬ್ ಲೈನ್‌ಗಳು ಬ್ಲಾಕ್ ಆಗಿದ್ದು, ಸರಿಪಡಿಸುವಂತೆ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರಿಗೆ ವಾರ್ಡ್ ವೀಕ್ಷಣೆಗಾಗಿ ಕರೆಸಿ ಸ್ಥಳ ಪರಿಶೀಲನೆ ನಡೆಸಿ ಈ ಕೂಡಲೇ ಸರಿಪಡಿಸುತ್ತಿವೆಂದು ಭರವಸೆ ನೀಡಿದ್ದು, ಸುಮಾರು 3 ತಿಂಗಳಾದರೂ ಈ ಕಾಂಗಾರಿಯನ್ನು ಕೈಗೆತ್ತಿಕೊಳ್ಳದ ಕಾರಣ ಎಂ.ಇ.ಐ. ಬಡಾವಣೆಯ ಕರಿಯಪ್ಪನವರು ಹಾಗು ರಾಮಣ್ಣನವರು ಜಲಮಂಡಳಿ ವಿರುದ್ದ ನಿಮ್ಮ ಹೋರಾಟಕ್ಕೆ ನಾವು ಬಲಪಡಿಸುತ್ತೇವೆ ಎಂದು ಸಭೆಯಲ್ಲಿ ಅಧ್ಯಕ್ಷರನ್ನು ಈ ಕೂಡಲೇ ಕ್ರಮಕೈಗೊಳ್ಳುವಂತೆ ಶೀಘ್ರವೇ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದರು.

ಹಾಗೂ ಬೀದಿ ದೀಪಗಳ ಅವ್ಯವಸ್ಥೆಗಳ ಬಗ್ಗೆ ಗಮನ ಹರಿಸಬೇಕೆಂದು ಸಭೆಯಲ್ಲಿ ತಿಳಿಸಲಾಯಿತು.

ಸಭೆಗೆ ಗೈರು ಹಾಜರಾದ ಸದಸ್ಯರು:

6. ರವಿ
7. ಚಿಕ್ಕ ಮಂಜಣ್ಣ
8. ರಂಗಸ್ವಾಮಯ್ಯ
9. ಸುಬ್ರಮಣಿ

Lalitha T. Ramanjaiah. K.L.R
[illegible] Ward No. 41,
Peenya Indl. Area,
Bruhat Bangalore Mahanagara Palike

ಕಾರ್ಯದರ್ಶಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 41.

ಪ್ರತಿಯನ್ನು:

5. ಮಾನ್ಯ ಜಂಟಿ ಆಯುಕ್ತರು(ದಾ.ವ) ಬಿಬಿಎಂಪಿ ರವರ ಮಾಹಿತಿಗಾಗಿ.
6. ಉಪ ಆಯುಕ್ತ (ದಾ.ವ) ಬಿಬಿಎಂಪಿ ರವರ ಮಾಹಿತಿಗಾಗಿ.
7. ಕಂದಾಯ ಅಧಿಕಾರಿ (ಹೆ.ವಿ) ಬಿಬಿಎಂಪಿ ರವರ ಮಾಹಿತಿಗಾಗಿ
8. ಕಛೇರಿ ಕಡತಕ್ಕೆ.